ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 170 ಶ್ರೀಮರ 2018(ಭಾಗ-7)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15-04-2020

## ಹಿಂಪಡೆಯಲಾದ ಆದೇಶ

ವಿಷಯ:- COVID -19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ನೌಕರರು/ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸದಂತೆ ಹಾಗೂ ವೇತನವನ್ನು ಕಡಿತಗೊಳಿಸದಿರುವ ಬಗ್ಗೆ.

ಉಲ್ಲೇಖ:
1. ಇದೇ ಸಮ ಸಂಖ್ಯೆ ಸುತ್ತೋಲೆ ದಿನಾಂಕ:21-03-2020.
2. ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 40-3/2020-DM-I(A), ದಿನಾಂಕ: 29-03-2020.
3. ಇದೇ ಸಮ ಸಂಖ್ಯೆ ಆದೇಶ ದಿನಾಂಕ:13-04-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಉಲ್ಲೇಖ(1)ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದೆ ಹಾಗೂ ಕೇಂದ್ರ ಸರ್ಕಾರವು ಉಲ್ಲೇಖ-2ರಲ್ಲಿ ಈಗಾಗಲೇ ಈ ಬಗ್ಗೆ ಆದೇಶವನ್ನು ದಿನಾಂಕ:29-03-2020ರಂದು ಹೊರಡಿಸಿರುತ್ತದೆ. ಆದ್ದರಿಂದ, ದಿನಾಂಕ:13-04-2020ರಂದು ಉಲ್ಲೇಖ(3)ರಲ್ಲಿ ಹೊರಡಿಸಿರುವ ಆದೇಶವನ್ನು ಹಿಂಪಡೆಯಲಾಗಿದೆ.

(ಪಿ. ಕ್ಯಾಪ್ಟನ್ ಮಣಿವಣ್ಣನ್)
ಸರ್ಕಾರದ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ:
1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ಕಾರ್ಮಿಕ ಆಯುಕ್ತಾಯಲದ ಮೂಲಕ)
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
3. ಅಪರ ಕಾರ್ಮಿಕ ಆಯುಕ್ತರು, (ಆಡಳಿತ ಮತ್ತು ಲೆಕ್ಕಪತ್ರ) ಕಾರ್ಮಿಕ ಭವನ, ಬೆಂಗಳೂರು.
4. ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂದವ್ಯ) ಕಾರ್ಮಿಕ ಭವನ, ಬೆಂಗಳೂರು.
5. ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಕರ್ನಾಟಕ ರಾಜ್ಯ ವಿಮಾ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
7. ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ,
8. ಕಲ್ಯಾಣ ಸುರಕ್ಷಾ ಭವನ, 8ನೇ ಮಹಡಿ, ಐಟಿಐ ಆವರಣ, ಡೈರಿ ಸರ್ಕಲ್, ಬೆಂಗಳೂರು-29.
9. ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ. 48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ, (ಆರ್.ಟಿ.ಓ. ಹತ್ತಿರ), ಯಶವಂತಪುರ, ಬೆಂಗಳೂರು.
10. ಎಲ್ಲಾ ಜಂಟಿ/ಉಪ ಕಾರ್ಮಿಕ ಆಯುಕ್ತರು/ಸಹಾಯಕ ಕಾರ್ಮಿಕ ಆಯುಕ್ತರು/ಕಾರ್ಮಿಕ
11. ಅಧಿಕಾರಿಗಳು/ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು

. . .2

# <u>WITHDRAWN ORDER</u>

**KaE 170 Sweemara 2018(Part 7)** **15.04.2020**

Sub: **Employers not to terminate workers or reduce their wages in the backdrop of COVID-19 situation**

Ref:
1. Circular KaE 170 Sweemara 2018 (Part 7) dated 21.03.2020
2. Central Government Order No. 40-3/2020-DM-I(A), dated 29.03.2020
3. Circular KaE 170 Sweemara 2018 (Part 7) dated 13.04.2020

With reference to the above subject, the Circular in Ref. 1 above has already been published. The Central Government has also published Circular in Ref. 2 above on 29.03.2020. Therefore, the Circular in Ref. 3 above is hereby withdrawn.

P. Capt. Manivannan
Labour Secretary
Government of Karnataka

Copy of the withdrawn circular of the Secretary of Labour, which is in Kannada, attached for information to members.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 170 ಸ್ಲೀಮರ 2018(ಭಾಗ-7)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13-04-2020

**ಆದೇಶ**

ವಿಷಯ:- COVID -19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ನೌಕರರು/ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸದಂತೆ ಹಾಗೂ ವೇತನವನ್ನು ಕಡಿತಗೊಳಿಸದಿರುವ ಬಗ್ಗೆ.

ಉಲ್ಲೇಖ:
1. ಸಮ ಸಂಖ್ಯೆ ಸರ್ಕಾರದ ಸುತ್ತೋಲೆ ದಿನಾಂಕ:21-03-2020.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 178 ಟಿ.ಎಸ್ .ಆರ್ 2020 ದಿನಾಂಕ: 30-03-2020

****

ಕ್ಯಾಪ್ಟನ್ ಮಣಿವಣ್ಣನ್.ಭಾ.ಆ.ಸೇ, ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಮತ್ತು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಆದ ನಾನು ಸರ್ಕಾರದ ಆದೇಶ ಸಂಖ್ಯೆ: ಕಂಇ 178 ಟಿ.ಎಸ್ .ಆರ್ 2020 ದಿನಾಂಕ:30-03-2020ರಲ್ಲಿ ವಿಪತ್ತು ನಿರ್ವಹಣೆ ಕಾಯ್ದೆ 2005 ಸೆಕ್ಷನ್ 69ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಆದೇಶಿಸುತ್ತಿದ್ದೇನೆ.

COVID -19 ತುರ್ತು ಪರಿಸ್ಥಿತಿಯ ಸನ್ನಿವೇಶದಲ್ಲಿ ಎಲ್ಲಾ ಸಾರ್ವಜನಿಕ / ಖಾಸಗಿ ಸಂಸ್ಥೆಗಳ ಉದ್ಯೋಗದಾತರು ತಮ್ಮ ಉದ್ಯೋಗಿಗಳನ್ನು, ವಿಶೇಷವಾಗಿ casual ಕೆಲಸಗಾರರರನ್ನು ಅಥವಾ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಬಾರದೆಂದು ಮತ್ತು ಅವರ ವೇತನವನ್ನು ಕಡಿತಗೊಳಿಸಬಾರದೆಂದು ಸೂಚಿಸಿದೆ. ಯಾವುದೇ ಕೆಲಸಗಾರರು ಈ ಅವಧಿಯಲ್ಲಿ ರಜೆ ತೆಗೆದುಕೊಂಡಿದ್ದಲ್ಲಿ ಅವರ ವೇತನದಲ್ಲಿ ಯಾವುದೇ ಪರಿಣಾಮಕಾರಿ ಕಡಿತವಿಲ್ಲದೇ, ಅಂತಹ ಕೆಲಸಗಾರರನ್ನು ಕರ್ತವ್ಯದಲ್ಲಿದ್ದಾರೆಂದು ಪರಿಗಣಿಸುವುದು. ಇದಲ್ಲದೇ COVID-19 ಕಾರಣದಿಂದಾಗಿ ಉದ್ಯೋಗದ ಸ್ಥಳದಲ್ಲಿ ಕಾರ್ಯನಿರ್ವಹಿಸದಿರುವ ಸಂದರ್ಭ ಉಂಟಾದಲ್ಲಿ ಅಂತಹ ಘಟಕದ (Working Unit) ನೌಕರರು ಕರ್ತವ್ಯದಲ್ಲಿದ್ದಾರೆಂದು ಪರಿಗಣಿಸುವುದು.

ಮುಂದುವರೆದು, ಈ ಸಂಬಂಧ ಮಾಡುವ ಯಾವುದೇ ಉಲ್ಲಂಘನೆಗಳು ವಿಪತ್ತು ನಿರ್ವಹಣೆ ಕಾಯ್ದೆ 2005 ರಡಿ ದಂಡನೆಯ ಕ್ರಮಕ್ಕೆ ಒಳಪಟ್ಟಿರುತ್ತದೆ. ಕಾರ್ಮಿಕ ಇಲಾಖೆಯು ಈ ನಿಟ್ಟಿನಲ್ಲಿ 48 ಗಂಟೆಯೊಳಗಾಗಿ ಸಹಾಯವಾಣಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದು.

(ಪಿ. ಕ್ಯಾಪ್ಟನ್ ಮಣಿವಣ್ಣನ್) 13/4
ಸರ್ಕಾರದ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ಕಾರ್ಮಿಕ ಆಯುಕ್ತಾಯಲದ ಮೂಲಕ)
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
3. ಅಪರ ಕಾರ್ಮಿಕ ಆಯುಕ್ತರು, (ಆಡಳಿತ ಮತ್ತು ಲೆಕ್ಕಪತ್ರ) ಕಾರ್ಮಿಕ ಭವನ, ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 170 ಸ್ಲೀಮರ 2018(ಭಾ-7)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:24.03.2020

ಸು ತ್ತೋ ಲೆ

ವಿಷಯ:- COVID -19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ನೌಕರರು/ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸದಂತೆ ಹಾಗೂ ವೇತನವನ್ನು ಕಡಿತಗೊಳಿಸದಿರುವ ಬಗ್ಗೆ.

****

COVID -19 ಸಾಂಕ್ರಾಮಿಕ ರೋಗವು ಸಮಾಜಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ. ಇದನ್ನು ಸಮಾಜದ ಸರ್ವರ ಸಂಘಟಿತ ಪ್ರಯತ್ನಗಳಿಂದ ಮಾತ್ರ ಈ ರೋಗವನ್ನು ತಟಸ್ಥಗೊಳಿಸಬಹುದಾಗಿದೆ. COVID-19 ಸೋಂಕನ್ನು ತಡೆಗಟ್ಟುವ ದೃಷ್ಟಿಯಿಂದ ಸರ್ಕಾರದ ಪ್ರಯತ್ನದಲ್ಲಿ ನಾಗರೀಕರನ್ನು ಮನೆಯಲ್ಲಿಯೇ ಇರಬೇಕೆಂದು ಮತ್ತು ಹೊರಹೋಗದಂತೆ ವಿನಂತಿಸುವುದರಿಂದ ಕಾರ್ಮಿಕಕರು/ ಉದ್ಯೋಗಸ್ಥರು ಕೆಲಸಕ್ಕಾಗಿ ವರದಿ ಮಾಡಲು ನಿರ್ಬಂಧಿಸಿದಂತಾಗುತ್ತದೆ. ಈ ನೆಪದಲ್ಲಿ ಉದ್ಯೋಗದಾತರು / ಆಡಳಿತವರ್ಗದವರು/ ಮಾಲೀಕರು ಕಾರ್ಮಿಕರ ಸೇವೆಗಳನ್ನು ವಜಾ ಮಾಡಬಹುದು ಅಥವಾ ವೇತನವಿಲ್ಲದ ರಜೆ ಮೇಲೆ ಹೋಗುವಂತೆ ಒತ್ತಾಯಿಸುವಂತಹ ಘಟನೆಗಳು ಉಂಟಾಗಬಹುದು.

ಇಂತಹ ಸನ್ನಿವೇಶದಲ್ಲಿ ಎಲ್ಲಾ ಸಾರ್ವಜನಿಕ / ಖಾಸಗಿ ಸಂಸ್ಥೆಗಳ ಉದ್ಯೋಗದಾತರು ತಮ್ಮ ಉದ್ಯೋಗಿಗಳನ್ನು, ವಿಶೇಷವಾಗಿ casual ಕೆಲಸಗಾರರರನ್ನು ಅಥವಾ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಬಾರದೆಂದು ಮತ್ತು ಅವರ ವೇತನವನ್ನು ಕಡಿತಗೊಳಿಸಬಾರದೆಂದು ಸೂಚಿಸಿದೆ. ಯಾವುದೇ ಕೆಲಸಗಾರರು ಈ ಅವಧಿಯಲ್ಲಿ ರಜೆ ತೆಗೆದುಕೊಂಡರೆ ಅವರ ವೇತನದಲ್ಲಿ ಯಾವುದೇ ಪರಿಣಾಮಕಾರಿ ಕಡಿತವಿಲ್ಲದೇ, ಆ ಕೆಲಸಗಾರರು ಕರ್ತವ್ಯದಲ್ಲಿದ್ದಾರೆಂದು ಪರಿಗಣಿಸುವುದು. ಇದಲ್ಲದೇ COVID-19 ಕಾರಣದಿಂದಾಗಿ ಉದ್ಯೋಗದ ಸ್ಥಳದಲ್ಲಿ ಕಾರ್ಯನಿರ್ವಹಿಸದಿರುವ ಸಂದರ್ಭ ಉಂಟಾದಲ್ಲಿ ಅಂತಹ ಘಟಕದ (Working Unit) ನೌಕರರು ಕರ್ತವ್ಯದಲ್ಲಿದ್ದಾರೆಂದು ಪರಿಗಣಿಸುವುದು.

ಈ ಸಂದರ್ಭಗಳಲ್ಲಿ ಕಾರ್ಮಿಕರು/ ನೌಕರರನ್ನು ಕೆಲಸದಿಂದ ವಜಾಗೊಳಿಸಿದರೇ ಅಥವಾ ವೇತನವನ್ನು ಕಡಿತಗೊಳಿಸಿದರೆ ಇನ್ನಷ್ಟು ಸಂಕಷ್ಟದ ಪರಿಸ್ಥಿತಿ ಉಂಟಾಗುತ್ತದೆ ಹಾಗೂ ನೌಕರರ ಆರ್ಥಿಕ ಸ್ಥಿತಿಯು ಸಹ ದುರ್ಬಲಗೊಳ್ಳುತ್ತದೆ. ಇದರಿಂದ ಈ ಸಾಂಕ್ರಾಮಿಕ ರೋಗವನ್ನು ಎದುರಿಸಲು ಅವರಲ್ಲಿರುವ ಸ್ಥೈರ್ಯವನ್ನು ಕುಗ್ಗಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆ/ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ ಇಲಾಖೆಗಳ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಂಸ್ಥೆಗಳು/ ಕಾರ್ಖಾನೆಗಳ ಮಾಲೀಕರು/ ಆಡಳಿತ ವರ್ಗದವರಿಗೆ ಅಗತ್ಯವಾದ ಸಲಹೆಗಳನ್ನು ನೀಡುವಂತೆ ನಿರ್ದೇಶಿಸಲಾಗಿದೆ.

(ಕರಡು ಮಾನ್ಯ ಕಾರ್ಮಿಕ ಸಚಿವರಿಂದ ಅನುಮೋದಿಸಲ್ಪಟ್ಟಿದೆ)

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ:

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
2. ಅಪರ ಕಾರ್ಮಿಕ ಆಯುಕ್ತರು, (ಆಡಳತ ಮತ್ತು ಲೆಕ್ಕಪತ್ರ) ಕಾರ್ಮಿಕ ಭವನ, ಬೆಂಗಳೂರು.
3. ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂದವ್ಯ) ಕಾರ್ಮಿಕ ಭವನ, ಬೆಂಗಳೂರು.
4. ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ,
ನಿರ್ದೇಶಕರ ಕಛೇರಿ, ಕಲ್ಯಾಣ-ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ ಬೆಂಗಳೂರು – 560 029
email: directorfbish@gmail.com   Website: www.labour.karnataka.gov.in   Telephone: 080-29753051

ಸಂ. ಕಾಬಾಇ2/ಎಫ್‌ಬೈಎ/ಇತರೆ/ಪಿಆರ್–34/2019–20   ದಿನಾಂಕ : 24.03.2020

## ಸುತ್ತೋಲೆ

ವಿಷಯ : COVID 2019 - ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ನೌಕರರು/ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸದಂತೆ ಹಾಗೂ ವೇತನವನ್ನು ಕಡಿತಗೊಳಿಸದಿರುವ ಬಗ್ಗೆ.

ಉಲ್ಲೇಖ : 1. ಜಂಟಿ ಕಾರ್ಯದರ್ಶಿಗಳು, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಭಾರತ ಸರ್ಕಾರ ರವರ ಪತ್ರ ಸಂಖ್ಯೆ: M-11011/08/2020-media ದಿನಾಂಕ 20.03.2020

2. ಸರ್ಕಾರದ ಸುತ್ತೋಲೆ ಸಂಖ್ಯೆ : ಕಾಇ 170 ಸ್ಥಿಮರ 2018 (ಭಾ–7) ದಿನಾಂಕ 24.03.2020

*****

COVID 2019 - ಸಾಂಕ್ರಾಮಿಕ ರೋಗವು ಸಮಾಜಕ್ಕೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದ್ದು, ಇದನ್ನು ಸಮಾಜದ ಸರ್ವರ ಸಂಘಟಿತ ಪ್ರಯತ್ನಗಳಿಂದ ಪರಿಣಾಮಕಾರಿಯಾಗಿ ಎದುರಿಸಬಹುದಾಗಿರುತ್ತದೆ. ಈ ರೋಗವನ್ನು ತಡೆಗಟ್ಟುವ ದೃಷ್ಟಿಯಿಂದ ಸರ್ಕಾರವು, ಪ್ರತಿಯೊಬ್ಬ ನಾಗರೀಕರು ಮನೆಯಲ್ಲಿಯೇ ಇರುವಂತೆ ಹಾಗೂ ಮನೆಯಿಂದ ಹೊರ ಹೋಗದಂತೆ ತಡೆಯುವ ನಿಟ್ಟಿನಲ್ಲಿ ನಿಗದಿತ ಕಾರ್ಖಾನೆಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಕಾರ್ಖಾನೆಗಳನ್ನು ದಿನಾಂಕ 31.03.2020 ರ ಮಧ್ಯ ರಾತ್ರಿ 12.00 ಘಂಟೆಯವರೆಗೆ ಕಡ್ಡಾಯವಾಗಿ ಮುಚ್ಚುವಂತೆ ಆದೇಶಿಸಿರುತ್ತದೆ. ಈ ಕಾರಣವನ್ನೇ ನೆಪವಾಗಿ ಪರಿಗಣಿಸಿ ಉದ್ಯೋಗದಾತರು / ಆಡಳಿತವರ್ಗದವರು ಕಾರ್ಮಿಕವರ್ಗದವರನ್ನು ಅದರಲ್ಲೂ ವಿಶೇಷವಾಗಿ ಗುತ್ತಿಗೆ ಕಾರ್ಮಿಕರು ಮತ್ತು ದಿನಗೂಲಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವ ಅಥವಾ ಅವರನ್ನು ವೇತನವಿಲ್ಲದ ರಜೆಯ ಮೇಲೆ ಹೋಗುವಂತೆ ಒತ್ತಾಯಿಸುವಂತಹ ಪರಿಸ್ಥಿತಿಯುಂಟಾಗಬಹುದು. ಈ ಪರಿಣಾಮಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ನಿಟ್ಟಿನಲ್ಲಿ ಸಂಘಟಿತವಾಗಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದು ಪ್ರತಿಯೊಬ್ಬ ಉದ್ಯೋಗದಾತರ/ಆಡಳಿತವರ್ಗದವರ ಜವಾಬ್ದಾರಿಯಾಗಿರುತ್ತದೆ.

ಪ್ರಸ್ತುತ ಸನ್ನಿವೇಶದ ಅವಶ್ಯಕತೆಯನ್ನು ಅರಿತು ರಾಜ್ಯದಲ್ಲಿನ ಎಲ್ಲಾ ನೋಂದಾಯಿತ ಕಾರ್ಖಾನೆಗಳ ಉದ್ಯೋಗದಾತರು ಯಾವುದೇ ಕಾರ್ಮಿಕರನ್ನು ಅದರಲ್ಲೂ ವಿಶೇಷವಾಗಿ ಗುತ್ತಿಗೆ ಕಾರ್ಮಿಕರು ಮತ್ತು ದಿನಗೂಲಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಬಾರದೆಂದು ಮತ್ತು ಅವರ ಸದರಿ ಅವಧಿಯ ಗೈರುಹಾಜರಿಯನ್ನು ವೇತನ ಸಹಿತ ರಜೆಯೆಂದು ಪರಿಗಣಿಸಿ, ಅವರ ವೇತನವನ್ನು ಕಡಿತಗೊಳಿಸಬಾರದೆಂದು ಈ ಮೂಲಕ ಸೂಚಿಸಲಾಗಿದೆ.

ಈ ಮೇಲಿನ ಹಿನ್ನಲೆಯಲ್ಲಿ, ಈ ಸಾಂಕ್ರಾಮಿಕ ರೋಗವನ್ನು ವ್ಯವಸ್ಥಿತವಾಗಿ ನಿಭಾಯಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ರಮಗಳನ್ವಯ ಕ್ರಮವಹಿಸಿ ಕಾರ್ಮಿಕರ ಆತ್ಮಸ್ಥೈರ್ಯವನ್ನು ವೃದ್ಧಿಸಿ, ಅವರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಎಲ್ಲಾ ಕಾರ್ಮಿಕರ ವೇತನವನ್ನು ಯಾವುದೇ ಕಡಿತವಿಲ್ಲದೆ ನೀಡುವ ಮುಖಾಂತರ ಕೈ ಜೋಡಿಸಿ ಸಹಭಾಗಿತ್ವ ವಹಿಸುವಂತೆ ಈ ಮೂಲಕ ಕೋರಲಾಗಿದೆ.

24/03/20

(ಕೆ. ಶ್ರೀನಿವಾಸ್)
ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು,
ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

ಇವರಿಗೆ

1. ಎಲ್ಲಾ ಕಾರ್ಖಾನೆಗಳ ಆಡಳಿತವರ್ಗದವರಿಗೆ
2. ಎಲ್ಲಾ ಅಧಿಕಾರಿಗಳಿಗೆ, ಈ ಸಂಬಂಧ ಸೂಕ್ತ ನಿರ್ದೇಶನ ನೀಡುವಂತೆ ಸೂಚಿಸಿದೆ.